ಕಳಿಸಬೇಕಾಗುತ್ತದೆ. ಈ ರೀತಿ ಸೂಕ್ತ ಕ್ರಮ ತೆಗೆದುಕೊಳ್ಳಲು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಆಗಾಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

ಊ) ಮೇಲೆ ವಿವರಿಸಲಾಗಿದೆ.

ಋ) ಇಲ್ಲ.

ಋ) ಬ್ಯಾಂಕಿನವರು ಸಾಲ ಮನ್ನಾ ಮಾಡಲು ಒಪ್ಪಿರುವುದಿಲ್ಲ. ಆದರೆ ಸರ್ಕಾರವತಿಯಿಂದ ಕಾರ್ಯನಿರ್ವಹಿಸದೇ ಇರುವ ಭಾಗ್ಯಲಕ್ಷ್ಮಿ ಸ್ಥಾವರಗಳ ಸಮೀಕ್ಷೆ ನಡೆಸಿ ಮತ್ತು ಕೇಂದ್ರ ಸರ್ಕಾರ ನೀಡುವ ಧನಸಹಾಯ ಸೌಲಭ್ಯ ಉಪಯೋಗಿಸಿಕೊಂಡು ದುರಸ್ತಿ ಮಾಡಲಾಗುವಂತಹ ಸ್ಥಾವರಗಳನ್ನು ದುರಸ್ತಿ ಮಾಡಲಾಗುವುದು.

ಶ್ರೀ ಎಸ್. ರುದ್ರಪ್ಪ : ರಾಜ್ಯದಲ್ಲಿ 1982-83 ರಿಂದ 1985-86 ರವರೆಗೆ ಒಟ್ಟು ಸ್ಥಾಪಿಸಲಾಗಿರುವ ಅನಿಲ ಯಂತ್ರಗಳೆಷ್ಟು ಎಂದು ನಾನು ಕೇಳಿರುವ ಪ್ರಶ್ನೆಗೆ 15,481 ಅನಿಲ ಯಂತ್ರಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದ್ದಾರೆ. ಆದರಲ್ಲಿ ಕೆಟ್ಟು ಹೋಗಿರತಕ್ಕ ಅನಿಲ ಯಂತ್ರಗಳು ಎಷ್ಟು ಎಂದು ಕೇಳಿರುವುದಕ್ಕೆ ಸುಮಾರು 2000 ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ದುರಸ್ತಿ ಬಗ್ಗೆ ಸರ್ಕಾರ ಕೈಗೊಂಡಿರುವರ ಕಾರ್ಯವೇನು ಎಂದು ನಾನು ಕೇಳಿರುವುದಕ್ಕೆ ಒಂದು ಅನಿಲ ಸ್ಥಾವರಕ್ಕೆ 2,500 ರೂ. ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. 400 ಅನಿಲ ಸ್ಥಾವರಕ್ಕೆ ಈಗಾಗಲೇ ಹಣವನ್ನೊದಗಿಸಿದ್ದೇವೆಂದು ಹೇಳಿದ್ದಾರೆ. ಸುಮಾರು 2000 ಅನಿಲ ಸ್ಥಾವರಗಳು ಕೆಟ್ಟು ಹೋಗಿರುವುದರಿಂದ ಇನ್ನು 1600 ಯಂತ್ರಗಳಿಗೆ ಏತಕ್ಕೆ ಹಣವನ್ನು ಕೊಟ್ಟಿಲ್ಲ ಎಂದು ಸನ್ಮಾನ್ಯ ಸಚಿವರನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಈ ಅನಿಲ ಯೋಜನೆಯ ಪ್ರಕಾರ ವಾಸ್ತವವಾಗಿ ಕೊಡಬೇಕಾದುದು 1,400 ರೂ.ಗಳು ಮಾತ್ರ. ಆದರೆ ನಾವು ಕೇಂದ್ರ ಸರ್ಕಾರಕ್ಕೆ ವಿಶೇಷವಾಗಿ ಬರೆದ ನಂತರ ಅವರು 2,500 ರೂ. ಕೊಡುವುದಕ್ಕೆ ಒಪ್ಪಿದ್ದಾರೆ. ಆದರೆ ಹೆಚ್ಚಿಗೆ ಕೊಡಬೇಕಾದರೆ ಎಲ್ಲೆಲ್ಲಿ ಅವಶ್ಯಕತೆ ಇದೆ ಅದನ್ನು ಸ್ಪೆಷಲ್ ಕೇಸ್ ಎಂದು ಮಾಡಿ ಅವರ ಮಂಜೂರಾತಿಯನ್ನು ತೆಗೆದುಕೊಂಡು ಕೊಡಬೇಕಾಗುತ್ತದೆ. ಅಂಥಾದ್ದು ಯಾವುದಾದರೂ ಪ್ರಕರಣ ಇದ್ದರೆ ಅದನ್ನು ತಾವು ನನ್ನ ಗಮನಕ್ಕೆ ತಂದರೆ ಮಂಜೂರಾತಿಯನ್ನು ತೆಗೆದುಕೊಂಡು ಹಣ ಕೊಡಿಸುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಎಸ್. ರುದ್ರಪ್ಪ : ಕೇಂದ್ರದವರು ಕೊಡುತ್ತಿರುವ ಹಣ 2,500 ರೂ. ಆದರೆ ಉಳಿದ ಹಣವನ್ನು ರೈತರು ಹಾಕಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಅವರು ಹಣವನ್ನೂ ಹಾಕಿಕೊಳ್ಳುವುದಕ್ಕಾಗುವುದಿಲ್ಲ; ಮತ್ತು ಗೊಬ್ಬರ ಹಾಕಿಕೊಳ್ಳುವುದಕ್ಕೂ ಆಗುವುದಿಲ್ಲ ಹಾಕಿದ ಗೊಬ್ಬರವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ, ಅವು ಏನಾದರೂ ಬಿರುಕನ್ನು, ಬಿಟ್ಟರೆ ಆ ಬಿರುಕನ್ನೂ ಮುಚ್ಚಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದರೆ ಸರ್ಕಾರದವರು ಇದಕ್ಕೆ ಏನು ಮಾಡಬೇಕೆಂದು ನಿಮ್ಮ ಅಭಿಪ್ರಾಯ?

ಮಹದಾಯೀ ಯೋಜನೆ ಬಗ್ಗೆ

2036 - ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಉತ್ತರ ಕರ್ನಾಟಕ ಹಾಗೂ ಹುಬ್ಬಳ್ಳಿ-ಧಾರವಾಡ ನಗರದ ಮಹಾಜನರ ಮಹದಾಯೀ ಯೋಜನೆಯ ಬೇಡಿಕೆ ಯಾವ ಹಂತದಲ್ಲಿದೆ.

ಆ) ಇದ್ದಲ್ಲಿ ಅದನ್ನು ಎಂದು ಪ್ರಾರಂಭ ಮಾಡಲಾಗುವುದು.

ಇ) ಈ ಯೋಜನೆಗಳಿಗೆ ಬಜೆಟ್ ನಲ್ಲಿ ಹಣ ಒದಗಿಸಿಲ್ಲವಾದರೆ ಒದಗಿಸುವ ವ್ಯವಸ್ಥೆ ಮಾಡುವುದಾಗಿ ನೀವು ಹೇಳಿರುವಂತೆ ಮಾಡುವಿರಾ?

ಈ) ಮಾಡಿದ್ದರೆ ಎಷ್ಟು ಹಣ ಒದಗಿಸಲಾಗಿದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಯೋಜನೆಯ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ.

ಆ) ಯೋಜನೆಗೆ ತಾಂತ್ರಿಕ ಸಮಿತಿಯ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಒಪ್ಪಿಗೆ ದೊರೆತ ಕೂಡಲೆ.

ಇ) ಪ್ರಸ್ತುತ ಸಾಲಿನಲ್ಲಿ ಈ ಯೋಜನೆಗೆ ಹಣ ಒದಗಿಸಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರಾ : ಮಾನ್ಯ ಅಧ್ಯಕ್ಷರೆ, ಭಾರಿ ನೀರಾವರಿ ಮಂತ್ರಿಗಳು ಉತ್ತರ ಕರ್ನಾಟಕದವರು. ಈ ಯೋಜನೆ ಬೆಳಗಾಂ ಜಿಲ್ಲೆಗೂ ಉಪಯುಕ್ತವಾಗಿದೆ, ಧಾರವಾಡ ಜಿಲ್ಲೆಗೂ ಉಪಯುಕ್ತವಾಗಿದೆ. ಮಾನ್ಯ ಮಂತ್ರಿಗಳ ಉತ್ತರವನ್ನು ನೋಡಿದರೆ ಇವರಿಗೆ ಇದರ ಬಗ್ಗೆ ನಿರ್ಲಕ್ಷ್ಯತನ, ಆಲಸ್ಯತನ ಕಂಡುಬರುತ್ತದೆ. ನಿನ್ನೆಯೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಈ ಯೋಜನೆಗೆ ಹಣವನ್ನು ಬಜೆಟ್‌ನಲ್ಲಿ ಪ್ರೊವೈಡ್ ಮಾಡದಿದ್ದರೂ ಕೂಡ ಈ ವರ್ಷ ಇದಕ್ಕೆ ಹಣವನ್ನು ಕೊಡುತ್ತೇನೆ ಮತ್ತು ಇದನ್ನು ಕೈಗೊಳ್ಳುತ್ತೇನೆ ಎಂದು ಹೇಳಿದ್ದಾರೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಹಣವನ್ನೂ ಕೂಡ ಇದಕ್ಕೆ ಕೊಟ್ಟಿದ್ದಾರೆ. ಆದರೆ ಈ ವಿಚಾರ ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲ. ಇವರಿಗೆ ಏತಕ್ಕೆ ಗೊತ್ತಿಲ್ಲವೋ, ಮತ್ತು ಏತಕ್ಕೆ ಈ ರೀತಿ ಉತ್ತರವನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಅಲಕ್ಷ್ಯತೆಯಿಂದ ಮತ್ತು ಬೇಜವಾಬ್ದಾರಿಯಿಂದ ಕೊಡಬಾರದೆಂದು ಹೇಳಬಯಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಾಂಡ್ರಾರವರಿಗೆ ಉತ್ತರವನ್ನು ಕೊಡಬೇಕಾಗಿದ್ದ ತಾರೀಕು 2-9-91. ಆದರೆ ಅನಿವಾರ್ಯ ಕಾರಣದಿಂದಾಗಿ ಇದು ಇವತ್ತು ಬಂದಿದೆ. ನಾನು ಬೇಜವಾಬ್ದಾರಿಯಿಂದ ಉತ್ತರವನ್ನೇನೂ ಕೊಟ್ಟಿರಲಿಲ್ಲ. ಏಕೆಂದರೆ ಅವತ್ತು ಏನು ಉತ್ತರ ಇತ್ತೋ ಅದೇ ಉತ್ತರವನ್ನೇ ಇವತ್ತು ಮಾನ್ಯ ಸದಸ್ಯರಿಗೆ ಒದಗಿಸುತ್ತಿದ್ದೇನೆ. ಇದು ಅವರಿಗೂ ಕೂಡ ಗೊತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ಯೋಜನೆಯನ್ನು ನಾವು ತೆಗೆದುಕೊಳ್ಳುತ್ತೇವೆ. ಆದುದರಿಂದ ಇದರ ಬಗ್ಗೆ ಮಾನ್ಯ ಸದಸ್ಯರು ಆಲೋಚನೆ ಮಾಡುವ ಅವಶ್ಯಕತೆ ಇಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂಡ್ರಾ : ಈ ಯೋಜನೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ? ಇದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಮತ್ತು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇದು ತಮಗೂ ಗೊತ್ತಿದೆ. ಆದಷ್ಟು ಶೀಘ್ರವಾಗಿ ಪ್ರಾರಂಭ ಮಾಡುತ್ತೇವೆ. ನಾನು ಹಿಂದೆ ಸರ್ಕಾರೀ ಮುಖ್ಯ ಸಚೇತಕನಾಗಿದ್ದಾಗ, ಆ ಸ್ಥಳಕ್ಕೆ ನಾನು ಭೇಟಿ ಕೊಟ್ಟಾಗ, ಅವನು ಬರಲಿಲ್ಲ, ಅನಂತರ ಕೆಲಸ ಪ್ರಾರಂಭವಾದ ಮೇಲೆ...

ಶ್ರೀ ಡಿ.ಎ. ಚಿನ್ನಪ್ಪ : ಮಾನ್ಯ ಅಧ್ಯಕ್ಷರೆ, ಚು.ಪ್ರ. 2110 ನನಗೆ ಉತ್ತರವೇ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :

Sri K.H. PATIL : I am sorry Sir. I don't have the information. Tomorrow it can be taken up.

Mr. Speaker : You don't have the answers.

Sri K.H. PATIL : It can be taken up tomorrow.

MR. Speaker : O.K. I will list it for tomorrow.

ಗಡಿ ಪ್ರದೇಶದ ಅಭಿವೃದ್ಧಿ

3549 - ಶ್ರೀ ಅಲ್ಲಂ ವೀರಭದ್ರಪ್ಪ (ಕೆರೆಗೋಡು) : ಮಾನ್ಯ ಯೋಜನಾ ಮತ್ತು ಸಾಂಖ್ಯಿಕ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಡಿ ಪ್ರದೇಶದ ಅಭಿವೃದ್ಧಿಗಾಗಿ ಸರ್ಕಾರದವರು ನಿಗಧಿಪಡಿಸಿರುವ ಹಣವೆಷ್ಟು?

ಆ) ಇದರಲ್ಲಿ ಬಳ್ಳಾರಿ ಜಿಲ್ಲೆಯ ಗಡಿ ಪ್ರದೇಶದ ಅಭಿವೃದ್ಧಿಗೆ ಮೀಸಲಾಗಿಟ್ಟಿರುವ ಹಣವೆಷ್ಟು?

ಶ್ರೀಮತಿ. ಕೆ.ಎಸ್. ನಾಗರತ್ನಮ್ಮ (ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು)

ಅ) 1991-92ನೇ ಸಾಲಿಗೆ ಗಡಿ ಪ್ರದೇಶ ಅಭಿವೃದ್ಧಿಗಾಗಿ 10 ಕೋಟಿ ರೂಪಾಯಿಗಳನ್ನು ಸರ್ಕಾರವು ನಿಗದಿ ಪಡಿಸಿದೆ.

ಆ) ಗುಲ್ಬರ್ಗಾ ವಿಭಾಗದ ನಾಲ್ಕು ಜಿಲ್ಲೆಗಳು ಹೈದರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಹಣ ಪಡೆಯುತ್ತಿರುವುದರಿಂದ ಬಳ್ಳಾರಿ ಜಿಲ್ಲೆಗೆ ಗಡಿ ಪ್ರದೇಶದ ಅಭಿವೃದ್ಧಿಯಲ್ಲಿ ಹಣ ಬಿಡುಗಡೆ ಮಾಡಿರುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ಈ ವರ್ಷ ಡೆವಲಪ್ ಮೆಂಟ್ ಬಾರ್ಡರ್ ಫಂಡ್ಸ್ ಎಂದು ಹೇಳಿ ಹೈದರಾಬಾದ್ ಕರ್ನಾಟಕ ಡೆವಲಪ್ ಮೆಂಟ್‌ಗೆ ಎಕ್ಸ್‌ಟ್ರಾ ಫಂಡ್ಸ್ ಕೊಟ್ಟಿರುವುದಕ್ಕೋಸ್ಕರ ಈ ವರ್ಷಕ್ಕೆ ಕೊಡುವುದಕ್ಕಾಗುವುದಿಲ್ಲ, ಆದಕಾರಣ ಅದರಲ್ಲಿಯೇ ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಮಾನ್ಯ ಮಂತ್ರಿಗಳಿಗೆ ಕೇಳುವುದೇನೆಂದರೆ, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬಾರ್ಡರ್ ಫಂಡ್ಸ್ ಬಂದು ಇನ್ನರ್ ಲೋಡ್ಸ್, ಆಸ್ಪತ್ರೆಗಳಿಗೆ, ಎಜ್ಯುಕೇಷನ್ ಡೆವಲಪ್‌ಮೆಂಟ್ಸ್ ಗೆಂದು ಮಾಡಿದ್ದಾರೆ. ಇದು ಬಾರ್ಡರ್ ಡೆವಲಪ್‌ಮೆಂಟ್‌ಗೆ ಸಂಬಂಧಪಟ್ಟಿದ್ದು. ನಮ್ಮ ಬಳ್ಳಾರಿ ತಾಲ್ಲೂಕಿನಲ್ಲಿ ಬಹಳಷ್ಟು ಡಕಾಯತ್, ನಕ್ಸಲೈಟ್ ಆಕ್ಟಿವಿಟೀಸ್ ಇದೆ. ಆದಕಾರಣ ತಾವು ದಯವಿಟ್ಟು ಇದನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.